**2ನೇ ಹೆಚ್ಚುವರಿ ಸಿವಿಲ್ ಜಡ್ಜ್ ಮತ್ತು ಜೆಎಂಎಫ್‌ಸಿ ನ್ಯಾಯಾಲಯ, ಹೊಸಕೋಟೆ**

**ಓ.ಎಸ್.293/2014**

**ಡಿ .ಡಬ್ಲ್ಯೂ - 1**

**ಪ್ರಮಾಣೀಕರಿಸಿದ ದಿನಾಂಕ:16.11.2024**

**ಪಾಟೀ ಸವಾಲು : ವಾದಿ ಪರ ವಕೀಲರಿಂದ : -**

ಪ್ರಸ್ತುತ ವಾದಿಗಳು ಓ.ಎಸ್.ನಂ.941/2007 ಎಂಬ ದಾವೆಯನ್ನು ಪಾಲು ವಿಭಾಗಕ್ಕಾಗಿ ಸಲ್ಲಿಸಿದ್ದರು ಎಂದರೆ ಸರಿ. ಸದರಿ ದಾವೆ ನಿ.ಪಿ.1 ರ ಪ್ರಕಾರ 2008 ನೇ ಸಾಲಿನಲ್ಲಿ ರಾಜಿ ಆಗಿರುತ್ತದೆ ಎಂದರೆ ಸರಿ. ಸದರಿ ದಾವೆಯಲ್ಲಿ ಪ್ರಸ್ತುತ ದಾವೆಯ ವಾದಿಗಳು ಸಹ ಪಕ್ಷಗಾರರಾಗಿದ್ದರು ಎಂದರೆ ಸರಿ. ನಿ.ಪಿ.1 ರಲ್ಲಿ ವಾದಿಗಳ ಹಾಗೂ ನನ್ನ ಸಹಿ ಸಹ ಇರುತ್ತದೆ ಎಂದರೆ ಸರಿ. ನಿ.ಪಿ.1 ರಲ್ಲಿ ಸದರಿ ದಾವಾ ಸ್ವತ್ತಿನ 2 ಎಕರೆ 4 ಗುಂಟೆಯನ್ನು ರಾಧಾದೇವಿಯವರಿಗೆ ಮಾರಾಟ ಮಾಡಿ, ಉಳಿಕೆ 1 ಎಕರೆ 1 1/2 ಗುಂಟೆಯಲ್ಲಿ ಸಮಪಾಲುನ್ನು ಮಾಡಿಕೊಳ್ಳುತ್ತೇವೆ ಎಂದು ಬರೆಸಿರುತ್ತೇವೆ ಎಂದರೆ ಸರಿ. ಸದರಿ ನಿ.ಪಿ.1 ದಿ:12.11.2008 ರಂದು ಮಾಡಿಕೊಂಡಿರುತ್ತೇವೆ ಎಂದರೆ ಸರಿ. ನಿ.ಪಿ.8 ರ ಪ್ರಕಾರ ಸದರಿ ದಾವೆಯಲ್ಲಿ ಪಡೆದ ರಾಜಿ ಡಿಕ್ರಿಯನ್ನು ದಿ:16.03.2009 ರಲ್ಲಿ ನೊಂದಾಯಿಸಿಕೊಂಡಿರುತ್ತೇವೆ ಎಂದರೆ ಸರಿ. ನಿ.ಪಿ.8 ರ ನೊಂದಣಿ ಸಂಖ್ಯೆ:5710 ಆಗಿರುತ್ತದೆ ಎಂದರೆ ಸರಿ. ನಿ.ಪಿ.8 ಅನ್ನು ನೊಂದಾಯಿಸುವ ಸಮಯದಲ್ಲಿಯೇ, ಸದರಿ ರಾಧಾದೇವಿಯವರಿಗೆ ನಿ.ಪಿ.12 ರ ಪ್ರಕಾರ ಕ್ರಯಪತ್ರವನ್ನು ನೊಂದಣಿ ಸಂಖ್ಯೆ:5714 ರಂತೆ ಮಾಡಿಕೊಟ್ಟಿರುತ್ತೇವೆ ಎಂದರೆ ಸರಿ. ನಿ.ಪಿ.12 ರ ಸಮಯದಲ್ಲಿ 1 ನೇ ಪ್ರತಿವಾದಿಗೆ ರೂ.1,90,000/- ಡಿ.ಡಿ ಮುಖಾಂತರ ಮತ್ತು ರೂ.26,608/- ಗಳನ್ನು ನಗದು ರೂಪದಲ್ಲಿ, ಅದೇ ರೀತಿ ನನಗೆ ರೂ.90,000/- ಡಿ.ಡಿ ಮುಖಾಂತರ, ರೂ.1,00,000/- ಚೆಕ್ಕು ಮುಖಾಂತರ, ರೂ.26,666/- ನಗದು ರೂಪದಲ್ಲಿ, ಅದೇ ರೀತಿ 5 ನೇ ಪ್ರತಿವಾದಿಗೆ ರೂ.1,00,000/- ಗಳನ್ನು ಡಿ.ಡಿ ಮುಖಾಂತರ ನೀಡಿರುತ್ತಾರೆ ಎಂದರೆ ಸರಿ. ವಾದಿಗಳು ನನ್ನ ಸಹೋದರಿಯರಾಗಬೇಕು. 1 ರಿಂದ 8 ವಾದಿಗಳು ನನ್ನ ಅಕ್ಕನ ಮಕ್ಕಳಾಗಬೇಕು, 9 ನೇ ವಾದಿ ನನ್ನ ತಂಗಿ, 10 ರಿಂದ 18 ವಾದಿಗಳು ಅಶ್ರಫ್ ಬೀ ರವರ ಮಕ್ಕಳಿರುತ್ತಾರೆ.

ನನ್ನ ಮುಖ್ಯ ವಿಚಾರಣೆ ಪ್ರಮಾಣಪತ್ರದಲ್ಲಿರುವ ವಿಷಯಗಳು ನನಗೆ ಗೊತ್ತಿಲ್ಲ. ನನ್ನ ಪ್ರಮಾಣಪತ್ರದ 7ನೇ ಖಂಡಿಕೆಯಲ್ಲಿ ಹೇಳಿರುವ ಬಿಡುಗಡೆ ಪತ್ರವನ್ನು ದಿ:16.03.2009 ರಲ್ಲಿ ತಯಾರಿಸಿರುತ್ತದೆ. ಸದರಿ ದಾಖಲೆ ಆದ ನಂತರ ನಾವು ಓ.ಎಸ್.ನಂ.941/2007 ರಲ್ಲಿ ಯಾವುದೇ ತಿದ್ದುಪಡಿ ಮಾಡಿಕೊಂಡಿರುವುದಿಲ್ಲ. ನನ್ನ ಹತ್ತಿರ ಸದರಿ ಬಿಡುಗಡೆ ಪತ್ರದ ಅಸಲು ಪ್ರತಿ ಇದ್ದು, ಅದನ್ನು ಹಾಜರುಪಡಿಸಲು ತೊಂದರೆ ಇರುವುದಿಲ್ಲ, ಮುಂದಿನ ದಿನಾಂಕದಂದು ಹಾಜರುಪಡಿಸುತ್ತೇನೆ. ನೊಂದಾಯಿಸಿಕೊಂಡ ರಾಜಿ ಡಿಕ್ರಿಯ ಅಸಲು ಪ್ರತಿ ಸಹ ನನ್ನ ಸ್ವಾಧೀನದಲ್ಲಿದ್ದು, ಅದನ್ನು ಸಹ ಹಾಜರುಪಡಿಸುತ್ತೇನೆ.

**ಮುಂದುವರೆದ ಪಾಟೀ ಸವಾಲಿಗೆ ಸಮಯ ಕೋರಿದ್ದು, ನೀಡಲಾಯಿತು.**

**(ಮುಕ್ತ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದ ಮೇರೆಗೆ ಗಣಕೀಕರಿಸಲಾಯಿತು)**

**ಓ.ಹೇ.ಕೇ.ಸ.ಇದೆ**

**2ನೇ ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು, ಹೊಸಕೋಟೆ.**